website:www.bwssb.gov.in
email: caos@bwssb.gov.in

Fax : 080-22945102
Phone : 080-22945386

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

ಸಂಖ್ಯೆ: ಬೆಂಜಮಂ
No : BWSSB ]CHAPM/32-2019/EST32/ 211 /2021-22

ದಿನಾಂಕ
Date ] 30.09.21

**ಪ್ರಕಟಣೆ**

ವಿಷಯ: ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳ ನೈಜತಾ ವರದಿ ಕುರಿತು.

***

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ದಿನಾಂಕ: 24.08.2018ರ ಮಿಕ್ಕುಳಿದ ಮತ್ತು ಸ್ಥಳೀಯ ವೃಂದಗಳ ನೇಮಕಾತಿ ಅಧಿಸೂಚನೆಗೆ ಅನುಗುಣವಾಗಿ ಸಹಾಯಕ ಅಭಿಯಂತರ ಮತ್ತು ಪ್ರಯೋಗಾಲಯ ಸಹಾಯಕ ದರ್ಜೆ-I ಹುದ್ದೆಯ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಲಾಗಿದ್ದು, ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳ ಅಂಕಪಟ್ಟಿ/ಪದವಿ ಪ್ರಮಾಣ ಪತ್ರಗಳನ್ನು ದಿನಾಂಕ: 24.09.2021ರಂದು ನೋಂದಾಯಿತ ಅಂಚೆ ಮುಖಾಂತರ ಸಂಬಂಧಪಟ್ಟ ವಿಶ್ವವಿದ್ಯಾಲಯ/ಪರೀಕ್ಷಾ ಮಂಡಳಿ/ ಕಾಲೇಜುಗಳಿಗೆ ರವಾನಿಸಿ ನೈಜತಾ ವರದಿಯನ್ನು ಕೋರಲಾಗಿರುತ್ತದೆ.

ಶೈಕ್ಷಣಿಕ ದಾಖಲಾತಿಗಳ ನೈಜತಾ ವರದಿ ಪಡೆಯುವ ಸಂಬಂಧ ಆಯಾ ವಿಶ್ವವಿದ್ಯಾಲಯ/ಪರೀಕ್ಷಾ ಮಂಡಳಿ/ಕಾಲೇಜುಗಳ ಅಂತರ್ಜಾಲ(website)ದಲ್ಲಿ ಲಭ್ಯವಿದ್ದ ಮಾಹಿತಿಯನ್ವಯ 1) ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ, 2) ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಹಾಗೂ 3) ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಎಂಜಿನಿಯರಿಂಗ್, ಮೈಸೂರು ಇಲ್ಲಿಗೆ ರವಾನಿಸ್ಪಟ್ಟಿರುವ ದಾಖಲಾತಿಗಳ ನೈಜತಾ ವರದಿಗೆ ತಗಲುವ ವೆಚ್ಚವನ್ನು ಈಗಾಗಲೇ ಮಂಡಳಿಯಿಂದ ಪಾವತಿಸಿ ಅದರ ರಸೀದಿಯನ್ನು ಸಕ್ಷಮ ಪ್ರಾಧಿಕಾರಗಳಿಗೆ ಸಲ್ಲಿಸಲಾಗಿರುತ್ತದೆ.

ಮೇಲೆ ತಿಳಿಸಿರುವ ವಿಶ್ವವಿದ್ಯಾಲಯ/ಕಾಲೇಜುಗಳನ್ನು ಹೊರತುಪಡಿಸಿ ಉಳಿಕೆ ವಿಶ್ವವಿದ್ಯಾಲಯ/ಪರೀಕ್ಷಾ ಮಂಡಳಿ/ ಕಾಲೇಜುಗಳು ತಮ್ಮ ಅಂತರ್ಜಾಲದಲ್ಲಿ ನೈಜತಾ ವರದಿಯ ಶುಲ್ಕದ ಕುರಿತು ಯಾವುದೇ ಮಾಹಿತಿ ಪ್ರಕಟಿಸದಿರುವುದರಿಂದ ಸಹಾಯಕ ಅಭಿಯಂತರ ಮತ್ತು ಪ್ರಯೋಗಾಲಯ ಸಹಾಯಕ ದರ್ಜೆ-I ಹುದ್ದೆಯ ಅಂತಿಮ ಆಯ್ಕೆಪಟ್ಟಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ತಾವು ವಿದ್ಯಾಭ್ಯಾಸ ಮಾಡಿರುವ ವಿಶ್ವವಿದ್ಯಾಲಯ/ಕಾಲೇಜುಗಳಿಗೆ ತೆರಳಿ ಮಂಡಳಿಯಿಂದ ರವಾನಿಸಲಾದ ಅಂಕಪಟ್ಟಿಗಳ ನೈಜತೆಗೆ ಯಾವುದಾದರೂ ಶುಲ್ಕ ಭರಿಸಬೇಕಾದ್ದಲ್ಲಿ ಖುದ್ದು ಅಭ್ಯರ್ಥಿಗಳೇ ಭರಿಸಿ, ಅದರ ರಸೀದಿಯನ್ನು ಆಯಾ ವಿಶ್ವವಿದ್ಯಾಲಯ/ಕಾಲೇಜುಗಳಿಗೆ ಸಲ್ಲಿಸಿ ನೈಜತಾ ವರದಿಯನ್ನು ಮಂಡಳಿಗೆ ನೋಂದಾಯಿತ ಅಂಚೆ ಮುಖಾಂತರ ಸಲ್ಲಿಸುವಂತೆ ತಿಳಿಸಲು ಸೂಚಿಸಿದೆ.

30/9

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ**
**ಬೆಂಗಳೂರು ಜಲಮಂಡಳಿ**

30/9/21 30/9/21 20.08.21

**ಪ್ರತಿ:** ಸಹಾಯಕ ಅಭಿಯಂತರ ಮತ್ತು ಪ್ರಯೋಗಾಲಯ ಸಹಾಯಕ ದರ್ಜೆ-I ಹುದ್ದೆಯ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಗಮನಕ್ಕಾಗಿ.